# ಮನದ ಕಾಳಿಕೆಯ ಕಳೆಯುವ ರಾಮ



ಕುವೆಂಪು ಅವರ ಮೇರುಕೃತಿಗಳಲ್ಲೊಂದಾದ 'ಶ್ರೀ ರಾಮಾಯಣ ದರ್ಶನಂ' ಕಾವ್ಯಕ್ಕೆ ಐವತ್ತು ವರ್ಷ ತುಂಬಿದ ಸಂಭ್ರಮವನ್ನು, ಆ ಕೃತಿಯನ್ನು ರಂಗಭೂಮಿಗೆ ಅಳವಡಿಸುವ ಮೂಲಕ ಆಚರಿಸಲಾಗುತ್ತಿದೆ. ಕುವೆಂಪು ಕಟ್ಟಲು ಹೊರಟ 'ವಿಶ್ವಮಾನವ ತತ್ವದ ಭೂಮಿಕೆ' ನಾಟಕದುದ್ದಕ್ಕೂ ಅನುಭವಕ್ಕೆ ಬರುವುದು ರಂಗಪ್ರಯೋಗದ ಯಶಸ್ಸಿಗೆ ಉದಾಹರಣೆಯಂತಿದೆ.

■ ಎಂ.ಎಸ್. ಆಶಾದೇವಿ

ಆಧುನಿಕ ಕರ್ನಾಟಕದ ಸಾಂಸ್ಕೃತಿಕ ನಕಾಶೆ, ಅದರ ರೂಪ, ಗುಣ–ಗಂಧಗಳನ್ನು ಸೃಷ್ಟಿಸಿದ ಚೇತನಗಳಲ್ಲಿ ಕುವೆಂಪು ಅವರಿಗೆ ನಿರ್ಣಾಯಕ ಸ್ಥಾನವಿರುವುದು ಕಾಲ ಕಳೆದ ಹಾಗೆ ಇನ್ನೂ ಸ್ಪಷ್ಟವಾಗುತ್ತಿದೆ.

ಕಾವ್ಯಮೀಮಾಂಸೆಯಲ್ಲಿ ಕುವೆಂಪು ಕಟ್ಟಲು ಹೊರಟದ್ದು ದಾರ್ಶನಿಕ ಮೀಮಾಂಸೆಯನ್ನು. ತಾತ್ವಿಕತೆಯಾಗಿ ಅದರ ಪ್ರಾಯೋಗಿಕತೆ, ಅದರ ಸೋಲು–ಗೆಲುವು, ಮಿತಿಗಳೇನೇ ಇರಲಿ, ಕುವೆಂಪು ಒಟ್ಟಂದದಲ್ಲಿ ತಮ್ಮ ಮಾತು, ಬರಹ ಮತ್ತು ವ್ಯಕ್ತಿತ್ವದಲ್ಲಿ ಅಖಂಡವಾಗಿ ಪ್ರಸ್ತುತಪಡಿಸಿದ ನಿಲುವು ಮಾತ್ರ ಖಂಡಿತವಾಗಿಯೂ ದಾರ್ಶನಿಕವಾದದ್ದೇ. ಅವರ ಒಟ್ಟೂ ದಾರ್ಶನಿಕತೆಯ ಧ್ಯೇಯವಾಕ್ಯವೇ